## Udayavani – 02-05-2017

5/3/2017

# ಪ್ರತಿ ಜಿಲ್ಲೆಯಲ್ಲೂ ಬೆಳೆನೀತಿ ಜಾರಿಗೆ ಚಿಂತನೆ

**ಚಿಕ್ಕಮಗಳೂರು:** ರೈತರು ಎದುರಿಸುತ್ತಿರುವ ಸಂಕಷ್ಟ ಹೋಗಲಾಡಿಸಲು ಪ್ರತಿ ಜಿಲ್ಲೆಯಲ್ಲಿಯೂ ಬೆಳೆನೀತಿ ಜಾರಿಗೆ ತರುವುದು ಅಗತ್ಯ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಹೇಳಿದರು.


ಪ್ರಕಾಶ್ ಕಮ್ಮರಡಿ

ಮಂಗಳವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ಇಂದು ತೀವ್ರ ಸಂಕಷ್ಟದಲ್ಲಿದ್ದಾರೆ. ಹವಾಮಾನ ವೈಪರೀತ್ಯ, ಬೆಲೆ ಏರಿಳಿತ ಇದಕ್ಕೆ ಒಂದು ರೀತಿಯ ಕಾರಣವಾದರೆ, ಬೆಳೆಗೆ ಪೂರಕ ವಾತಾವರಣ ಇಲ್ಲದಿರುವೆಡೆ ಬೆಳೆ ಬೆಳೆಯುವುದೂ ಇದಕ್ಕೆ ಮತ್ತೊಂದು ರೀತಿಯ ಕಾರಣ ಎಂದರು.

ಆಯಾ ಜಿಲ್ಲೆಗಳಲ್ಲಿ ಯಾವ ಬೆಳೆಯನ್ನು ಬೆಳೆಯಬೇಕು, ಯಾವುದನ್ನುಬೆಳೆಯಬಾರದು ಎಂಬುದನ್ನು ರೈತರಿಗೆ ತಿಳಿಸಲು ಬೆಳೆ ನೀತಿ ಜಾರಿಗೆ ತರಬೇಕು. ಯಾವ ಬೆಳೆಯನ್ನು ಬೆಳೆಯಬೇಕೆಂದು ತಿಳಿಸಲಾಗುವುದೋ ಅದನ್ನು ಹೊರತುಪಡಿಸಿ ಬೇರೆ ಬೆಳೆ ಬೆಳೆದಲ್ಲಿ ಅದಕ್ಕೆ ಯಾವುದೇ ರೀತಿಯ ಸರ್ಕಾರದ ಸವಲತ್ತುಗಳನ್ನು ನೀಡುವುದಿಲ್ಲ ಎಂಬುದನ್ನು ಖಚಿತಪಡಿಸಬೇಕು. ಆಗ ರೈತರು ಸಾಕಷ್ಟು ಸಮಸ್ಯೆಗಳಿಂದ ಹೊರಬರಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

**ಕೃಷಿ ಭೂಮಿ ಹಾಳು:** ರಾಜ್ಯದೆಲ್ಲೆಡೆ ಪರಿಶೀಲಿಸಿದಾಗ ಒಟ್ಟಾರೆ 21 ಲಕ್ಷ ಹೆಕ್ಟೇರ್ ಕೃಷಿ ಭೂಮಿಯನ್ನು ಹಾಳು ಬಿಡಲಾಗಿದೆ. ಇದಕ್ಕೆ ಕಾರಣಗಳು ಹಲವು ಇದ್ದರೂ ಸಹ ಇದು ಅತ್ಯಂತ ಆತಂಕದ ವಿಚಾರ ಎಂದರು.

ಚಿಕ್ಕಮಗಳೂರು ಜಿಲ್ಲೆಯೊಂದರಲ್ಲಿಯೇ ತೋಟಗಾರಿಕಾ ಪ್ರದೇಶವೂ ಸೇರಿದಂತೆ 23 ಸಾವಿರ ಹೆಕ್ಟೇರ್ ಪ್ರದೇಶವನ್ನು ಹಾಳು ಬಿಡಲಾಗಿದೆ. ಇದರಲ್ಲಿ ಅತೀ ಹೆಚ್ಚು ಪ್ರದೇಶ ಮಳೆ ಆಶ್ರಿತ ಭತ್ತ ಬೆಳೆಯುವ ಪ್ರದೇಶವಾಗಿದೆ. ಇದರೊಂದಿಗೆ ಅಡಕೆಗೆ ಹಳದಿ ಎಲೆ ರೋಗ ಬಂದ ಹಿನ್ನೆಲೆಯಲ್ಲಿ ಸಾಕಷ್ಟುಪ್ರಮಾಣದ ತೋಟಗಾರಿಕಾ ಪ್ರದೇಶವನ್ನೂ ಹಾಳು ಬಿಡಲಾಗಿದೆ ಎಂದು ತಿಳಿಸಿದರು.

ಅಡಕೆ ಹಳದಿ ಎಲೆ ರೋಗ ನಿಯಂತ್ರಣಕ್ಕೆ ಈವರೆಗೆ ಸರಿಯಾದ ಸಂಶೋಧನೆ ಈವರೆಗೂ ಆಗಿಯೇ ಇಲ್ಲ, ಈ ಹಿನ್ನೆಲೆಯಲ್ಲಿ ಅಡಕೆ ಹಳದಿ ಎಲೆ ರೋಗ ಕುರಿತು ಸಮಗ್ರ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ. ವೈಜ್ಞಾನಿಕ ಸಮೀಕ್ಷೆಯಾಗಬೇಕು. ಎಷ್ಟು ಪ್ರಮಾಣದ ರೋಗ ಹರಡಿದೆ, ಯಾವ ಹಂತದಲ್ಲಿದೆ. ಇದನ್ನು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮ ಎಲ್ಲದರ ಬಗ್ಗೆ ಸಮೀಕ್ಷೆಯಾಗಬೇಕಿದೆ ಎಂದರು.

ಸಮೀಕ್ಷೆ ನಡೆಸಲು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಕೃಷಿ ಸಂಶೋಧನಾ ಕೇಂದ್ರದ ವಿಜ್ಞಾನಿಗಳು, ಕೃಷಿ ವಿಶ್ವವಿದ್ಯಾಲಯದ ವಿಜ್ಞಾನಿಗಳು, ತೋಟಗಾರಿಕಾ ಇಲಾಖೆ ವಿಜ್ಞಾನಿಗಳ ತಂಡ ರಚಿಸಲಾಗುವುದು. ಮೇ ಅಂತ್ಯದೊಳಗೆ ಇವರ ಸಭೆ ನಡೆಸಲಾಗುವುದು. ನವೆಂಬರ್ ಒಳಗೆ ಸಮೀಕ್ಷೆ ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

ಅಡಕೆ, ಮೆಣಸು ಸೇರಿದಂತೆ ತೋಟಗಾರಿಕಾ ಬೆಳೆಗಳ ಬೆಲೆ ಏರಿಳಿತವಾಗುತ್ತಿರುವುದೂ ಆತಂಕದ ವಿಚಾರ. ಅಡಕೆಗೆ ದಿಢೀರನೆ ಬೆಲೆ ಏರಿಕೆಯಾಗಿತ್ತು. ಬೆಳೆಗಾರರು ಅಡಕೆಯನ್ನು ಮಾರಲು ಕೊಂಡೊಯ್ದ ಕೂಡಲೆ ಬೆಲೆ ಇಳಿಕೆಯಾಗುತ್ತಿದೆ. ಆನ್‌ಲೈನ್ ಮಾರುಕಟ್ಟೆಯೊಂದೇ ಬೆಲೆ ನಿಯಂತ್ರಣಕ್ಕೆ ಪರಿಹಾರ ಎಂಬುದು ತಮ್ಮ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಅಡಕೆ ಹಾಗೂ ಅದರ ಉಪಬೆಳೆಗಳಿಗೆ ಆಧುನಿಕ ಮಾರುಕಟ್ಟೆಯ ಬಗ್ಗೆ ಬೆಳೆಗಾರರಲ್ಲಿ ಅರಿವು ಮೂಡಿಸಲು ಈ ತಿಂಗಳೊಳಗಾಗಿ ಶೃಂಗೇರಿಯಲ್ಲಿ ತಾಂತ್ರಿಕ ಕಾರ್ಯಾಗಾರ ಆಯೋಜಿಸಲಾಗುವುದು ಎಂದರು.

**ಮಂಡಳಿ ಅಗತ್ಯ:** ಅಡಕೆಗೆ ಒಂದು ಮಂಡಳಿ ರಚಿಸುವುದು ಅಗತ್ಯ ಎಂಬುದು ಕೃಷಿ ಬೆಲೆ ಆಯೋಗದ ಸ್ಪಷ್ಟ ನಿರ್ಧಾರ. ಈ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿ ರಚಿಸಲಾಗಿತ್ತು. ಸಮಿತಿಯು ಈಗ ವರದಿ ಸಲ್ಲಿಸಿದ್ದು ಮಂಡಳಿಯ ಅಗತ್ಯವಿದೆ ಎಂದು ಪ್ರತಿಪಾದಿಸಿದೆ ಎಂದು ತಿಳಿಸಿದರು.

ಮಂಡಳಿ ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಅಡಕೆ ಬೆಳೆಗಾರರ ಸಂಘಟನೆಗಳು ಹಾಗೂ ಸಹಕಾರ ಸಂಘಗಳ ಪ್ರಮುಖರು ಮತ್ತು ಅಧಿಕಾರಿಗಳ ಸಭೆಯನ್ನು ಶೀಘ್ರದಲ್ಲಿಯೇ ನಡೆಸಿ ಸಮಗ್ರ ವರದಿ ಸಿದ್ದಪಡಿಸಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಈ ಕುರಿತು ಅಡಕೆ ಬೆಳೆಯುವ ಪ್ರದೇಶಗಳ ಸಂಸದರೊಡನೆಯೂ ಚರ್ಚಿಸಲಾಗುವುದು ಎಂದರು. ಅಪರ ಜಿಲ್ಲಾಧಿಕಾರಿ ಎಂ.ಎಲ್.ವೈಶಾಲಿ ಉಪಸ್ಥಿತರಿದ್ದರು.

# Kannada Prabha – 02-05-2017

### ರೋಗದಿಂದಾಗಿ 4 ಸಾವಿರ ಹೆಕ್ಟೇರ್ ಭೂಮಿ ಪಾಳು: ಪ್ರಕಾಶ್ ಜಿ. ಕಮ್ಮರಡಿ

# ಹಳದಿಎಲೆ ರೋಗ ಸಮೀಕ್ಷೆಗೆ ತೀರ್ಮಾನ

• **ಕನ್ನಡಪ್ರಭ ವಾರ್ತೆ** ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಡಕೆ ಬೆಳೆಗೆ ತಗುಲಿರುವ ಹಳದಿ ಎಲೆರೋಗ ಪೀಡಿತ ಪ್ರದೇಶಗಳನ್ನು ಮತ್ತೊಮ್ಮೆ ಸಮಗ್ರ, ಹಾಗೂ ವೈಜ್ಞಾನಿಕ ಸಮೀಕ್ಷೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಕೃಷಿಬೆಲೆ ಆಯೋಗ ಅಧ್ಯಕ್ಷ ಪ್ರಕಾಶ್ ಜಿ. ಕಮ್ಮರಡಿ ಹೇಳಿದರು.



ಜಿಲ್ಲಾಧಿಕಾರಿ ಕಚೇರಿಸಭಾಂಗಣದಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಭೆಯಲ್ಲಿ ಪ್ರಮುಖ ನಾಲ್ಕೈದು ತೀರ್ಮಾನಗಳನ್ನು ತೆಗೆದುಕೊಂಡಿದ್ದು, ಅದರಲ್ಲಿ ಅಡಕೆ ಬೆಳೆಯನ್ನು ಬಾಧಿಸುತ್ತಿರುವ ಹಳದಿ ಎಲೆರೋಗವು ಒಂದಾಗಿದೆ ಎಂದರು.

4 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಹಳದಿ ಎಲೆರೋಗದಿಂದ ಭೂಮಿಯನ್ನು ಪಾಳು ಬಿಡಲಾಗಿದೆ. ಕಳೆದೆರಡು ದಿನಗಳಿಂದ ಶೃಂಗೇರಿ ಮತ್ತು ಕೊಪ್ಪ ತಾಲೂಕುಗಳ ಕೆಲವು ಪ್ರದೇಶಗಳಿಗೆ ಭೇಟಿ ನೀಡಿದ್ದು, ಸಂಬಂಧಿಸಿದ ಇಲಾಖೆ ತಜ್ಞರೊಂದಿಗೆ ಈ ಕುರಿತು ಚರ್ಚೆ ನಡೆಸಿದ್ದು, ಬೀಳು ಬಿಟ್ಟಿರುವ ಭೂಮಿಯನ್ನು ಹೇಗೆ ಬಳಕೆ ಮಾಡಿಕೊಳ್ಳಬಹುದು ಎಂಬುದರ ಬಗ್ಗೆ ತಿಳಿದುಕೊಳ್ಳಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಬಾಗಲಕೋಟೆ, ಶಿವಮೊಗ್ಗ ಮತ್ತು ಕಾಸರಗೋಡಿನ ಕೃಷಿ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕರ ಸಭೆಯನ್ನು ಮೇ ಅಂತ್ಯದೊಳಗೆ ಕರೆದು ಯಾವ ರೀತಿ ಸಮೀಕ್ಷೆ ನಡೆಸಬಹುದು ಎಂಬುದರ ಬಗ್ಗೆ ಚರ್ಚಿಸಿ ಎಂದು ತಿಳಿಸಿದರು.

ಹಳದಿ ಎಲೆರೋಗಕ್ಕೆ ಪರಿಹಾರ ಇದೆಯೋ, ಇಲ್ಲವೋ ಎಂಬ ಬಗ್ಗೆ ಅಧ್ಯಯನ ಸಮರ್ಪಕವಾಗಿ ನಡೆದಿಲ್ಲ, ವೈಜ್ಞಾನಿಕ ಸಮಿತಿಯ ಉನ್ನತ ಮಟ್ಟದ ಮತ್ತು ಸಮಗ್ರ ಸಂಶೋಧನೆಯ ರೂಪುರೇಷೆ ತಯಾರಿಸಲಾಗುವುದು. ಈಗಾಗಲೇ ಮಾರುಕಟ್ಟೆಯಲ್ಲಿ ಆನ್‌ಲೈನ್ ಮತ್ತು ಈ ಟೆಂಡರಿಂಗ್ ಮೂಲಕ ವಹಿವಾಟು ನಡೆಯುತ್ತಿದೆ ಎಂದರು.

ಎಲ್ಲ ಬೆಳೆಗಳಿಗೂ ಪ್ರತ್ಯೇಕ ಮಂಡಳಿ ಇದೆ. ಆದರೆ, ಅಡಕೆಗೆ ಮಂಡಳಿ ರಚನೆಯಾಗಿಲ್ಲ, ತೋಟಗಾರಿಕೆ ವಿವಿ ಉಪ ಕುಲಪತಿ ಮಂಡಳಿ ಕುರಿತು ನೀಡಿರುವ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರಕ್ಕೂ ಕಳುಹಿಸಲಾಗುವುದು. ರಾಜ್ಯದಲ್ಲಿ 21 ಲಕ್ಷ ಹೆಕ್ಟೇರ್ ಭತ್ತದ ಭೂಮಿ ಹಾಳುಬಿಡಲಾಗಿದೆ. ಈ ಜಿಲ್ಲೆಯಲ್ಲಿ 23 ಸಾವಿರ ಹೆಕ್ಟೇರ್ ಭೂಮಿಯನ್ನು ವಿವಿಧ ಕಾರಣಗಳಿಗಾಗಿ ಉಳುಮೆ ಮಾಡದೆ ಬೀಳುಬಿಟ್ಟಿದ್ದು, ಈ ಕುರಿತು ರೈತರನ್ನು ಕೇಳಿದರೆ ಭತ್ತ ಬೆಳೆಯಲು ಅಧಿಕ ವೆಚ್ಚ ತಗುಲುತ್ತಿದೆ ಎನ್ನುತ್ತಿದ್ದಾರೆ. ಭತ್ತದ ನಾಟಿ ತಳಿಗಳನ್ನು ಸಂರಕ್ಷಿಸುವ ನಿಟ್ಟಿನಲ್ಲಿ ಕಮ್ಮರಡಿಯಲ್ಲಿ ರೈತರಿಗೆ ಮೇ ಅಂತ್ಯದಲ್ಲಿ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಕಾರಣ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣಕ್ಕೆ ಬರುವ ಬೆಳೆಯ ದರವನ್ನು ಮಧ್ಯವರ್ತಿಗಳೆ ನಿರ್ಧರಿಸಿರುವುದು ಬೆಲೆ ಕುಸಿತಕ್ಕೆ ಕಾರಣವಾಗಿದೆ ಎಂದಾಗ, ಹಾಪ್‌ಕಾಮ್ಸ್ ವತಿಯಿಂದ ಬೆಳೆ ಖರೀದಿಸುವ ವ್ಯವಸ್ಥೆ ಆಗಬೇಕೆಂದು ತೋಟಗಾರಿಕೆ ಅಧಿಕಾರಿಗೆ ಸೂಚಿಸಿದರು.

ಕಾಳು ಮೆಣಸು ದರ ಏರುಪೇರಾಗುವ ಕುರಿತು ಕೇಳಿದಾಗ ಇದಕ್ಕೆ ಬೆಂಬಲ ಬೆಲೆ ನೀಡಲಾಗದು ಎಂದು ಭರವಸೆ ನೀಡಿದರು.

ಅಪರ ಜಿಲ್ಲಾಧಿಕಾರಿ ವೈಶಾಲಿ ಇದ್ದರು.